## ೨

# ಪುರುಷರು ಬೇಕಾಗಿದ್ದಾರೆ

ವಾಕ್ಯಭಾಗ: ಯೆಹೆಜ್ಕೇಲ 22:30.

ನಮ್ಮ ಹಿಂದಿನ ಪಾಠದಲ್ಲಿ, ಸಾಮಾನ್ಯವಾಗಿ ಕುಟುಂಬಗಳಲ್ಲಿ ಉದ್ಭವಿಸುವ ಸವಾಲುಗಳ ವಿಷಯಗಳನ್ನು ಪರಿಚಯಿಸಿದ್ದೇನೆ. ಈ ಪಾಠದಲ್ಲಿ, ಗಂಡಂದಿರಿಗೂ ತಂದೆಗಳಿಗೂ ಅಗತ್ಯವುಳ್ಳ ಜವಾಬ್ದಾರಿಗಳ ಕುರಿತಾಗಿ ನೋಡೋಣ; ಮುಂದಿನ ಪಾಠದಲ್ಲಿ ಹೆಂಡತಿ ಮತ್ತು ತಾಯಿಯ ಕುರಿತಾಗಿ ಅಭ್ಯಾಸ ಮಾಡೋಣ.

ಬಹಳ ಹಿಂದೆ, ದೇವರು ಹೇಳಿದ ಮಾತೇನಂದರೆ, "ನಾನು ದೇಶವನ್ನು ಹಾಳು ಮಾಡದಂತೆ ನನ್ನೆದುರಿಗೆ ದೇಶರಕ್ಷಣೆಗಾಗಿ ಪೌಳಿಯ ಒಡಕಿನಲ್ಲಿ ನಿಲ್ಲುವದಕ್ಕೂ ಗೋಡೆಯನ್ನು ಗಟ್ಟಿ ಮಾಡುವದಕ್ಕೂ ತಕ್ಕವನನ್ನು ನಾನು ಹುಡುಕಲು ಯಾರೂ ಸಿಕ್ಕಲಿಲ್ಲ" (ಯೆಹೆಜ್ಕೇಲ 22:30ಃ). ನಾಶವು ಉಂಟಾಗುವಂತೆ ಇಸ್ರಾಯೇಲ್ಯರ ಮಕ್ಕಳು ಪಾಪ ಮಾಡಿದ್ದರು. ಗೋಡೆಯನ್ನು, ಕಟ್ಟುವದಕ್ಕಾಗಿ ದೇವರು ಒಬ್ಬ ಮನುಷ್ಯನನ್ನು ಹುಡುಕಿದನು. ಒಡಕಿನಲ್ಲಿ ನಿಲ್ಲುವವನಿಗಾಗಿ ಹುಡುಕಿದನು; ಆದರೆ ಅಂತಹ ಮನುಷ್ಯನು ದೇವರಿಗೆ ದೊರೆಯಲಿಲ್ಲ.[1]

ಪ್ರತಿಯೊಂದು ಸಮಾಜದಲ್ಲು ಸರಿದೂಗುವಂತಹ ವ್ಯಕ್ತಿಯ ದೊಡ್ಡ ಅವಶ್ಯಕತೆ ಇರುತ್ತದೆ - ದೇವರ ಮನುಷ್ಯನು, ಒಪ್ಪಿಸಿಕೊಟ್ಟವನು, ಧೈರ್ಯವುಳ್ಳವನು, ನ್ಯಾಯಕತ್ವದ ಜವಾಬ್ದಾರಿಯನ್ನು ತೆಗೆದು ಕೊಳ್ಳುವವನ ಅವಶ್ಯವಿದೆ ಆದರೆ ಅಂತಹ ಮನುಷ್ಯರು ದೊರಕುವದು ವಿರಳವಾಗಿರುತ್ತದೆ. "ತಕ್ಕವನನ್ನು ಹುಡುಕಲು ... ; ಯಾರೂ ಸಿಕ್ಕಲಿಲ್ಲ."

ಕಳೆದ ವರ್ಷಗಳಲ್ಲಿ, ನಾನು ಒಂದು ಸಭೆಯಲ್ಲಿ ಕೆಲಸಮಾಡುತ್ತಿದೆ, ನಾವು ಅಲ್ಲಿ ಎಲ್ಲರ ಬಗ್ಗೆಯೂ ಎಲ್ಲವುಗಳ ಬಗ್ಗೆಯೂ ಒತ್ತಿ ಹೇಳಿದ್ದೇನೆ. ಆದರೆ ಗಂಡಸರ ಬಗ್ಗೆ ಹೇಳಲಿಲ್ಲ. ಸ್ತ್ರೀಯರಿಗಾಗಿ ವಿಶೇಷ ಕೂಟಗಳನ್ನು ನಡೆಸಿದ್ದೆವು: ಜನರನ್ನು ಸಂಧಿಸುವ ಕೆಲಸವನ್ನು ಸ್ತ್ರೀಯರೇ ಮಾಡಿದ್ದರು; ಅವರು ಅಸ್ವಸ್ಥತೆ ಇರುವವರನ್ನು ಸಂತೈಸಿದರು; ಉತ್ತಮವಾದ ತಾಯಿಯರ ಹಾಗೂ ಹೆಂಡತಿಯರ ಕುರಿತು ವಿಶೇಷ ತರಗತಿಗಳನ್ನು ಅವರಿಗಾಗಿ ನಡೆಸಿದೆವು. ಯೌವನಸ್ಥರ ಬಗ್ಗೆ ವಿಶೇಷ ಯೋಜನೆಗಳನ್ನು ಮಾಡಿ ಅವರಿಗೆ ದರ್ಶನದ ಕುರಿತಾಗಿ ಬೋಧಿಸಿದೆವು, ಮತ್ತು "ಅವರುಗಳು ಮುಂದಿನ ನಾಯಕರುಗಳು ಎಂಬುದಾಗಿ ತಿಳಿಸಿದೆವು." ಅದು ಸತ್ಯವಾದದ್ದೇ ಒಳ್ಳೆಯದ್ದೇ - ಆದರೆ ಈ ದಿವಸಗಳ ಗಂಡಸರಾದ ನಾಯಕರುಗಳ ಕುರಿತಾಗಿ ಏನು? ಗಂಡಸರು ಬೆಂಕಿಯನ್ನು ಹೊಂದಿದವರಾಗಿ ಕರ್ತನ ಕೆಲಸವನ್ನು ಮಾಡದೆ ಹೋದರೆ, ಸಭೆಯ ಜನರು ಮಾಡುವಂಥ ಸಕಲ ಕಾರ್ಯಗಳು ಕುಂಠಿತವಾಗುತ್ತವೆ.

ಯಾವ ವಿಧವಾದಂಥ ಗಂಡಸರ ಅವಶ್ಯ ನಮ್ಮ ಸಮಾಜಕ್ಕೆ, ನಮ್ಮ ಸಭೆಗೆ, ನಮ್ಮ ಕುಟುಂಬಗಳಿಗೆ ಬೇಕಾಗಿದೆ?

### ಕ್ರೈಸ್ತರಾದ ಗಂಡಸರು ಬೇಕಾಗಿದ್ದಾರೆ: ನಿಜವಾದ ಕ್ರೈಸ್ತರು

ಕ್ರೈಸ್ತರಾದ ಗಂಡಸರ ಅತಿ ಅವಶ್ಯವಾಗಿ ಬೇಕಾಗಿದ್ದಾರೆ - ಅವರು ನಿಜವಾದ ಕ್ರೈಸ್ತರಾಗಿರಬೇಕು. ಪರಲೋಕದಲ್ಲಿ ಮದುವೆ ಮಾಡಿಕೊಳ್ಳುವುದೂ ಇಲ್ಲ ಮದುವೆ ಮಾಡಿಕೊಳ್ಳುವದೂ ಇಲ್ಲ ಎಂದು ಒಬ್ಬರು ಹಾಸ್ಯಕರವಾಗಿ ನುಡಿದಿದ್ದಾರೆ (ಮತ್ತಾಯ 22:30) ಯಾಕೆಂದರೆ ಅಲ್ಲಿ ಹೆಚ್ಚು ಪುರುಷರು ಇರುವುದಿಲ್ಲ. ಅದು ಸರಿಯಾದ ಕಾರಣವಲ್ಲ, ಆದರೆ

ಅದರ ಅರ್ಥವನ್ನು ಅರಿತುಕೊಂಡಿದ್ದೇನೆ. ನನಗೆ ತಿಳಿದಿರುವ ಅನೇಕ ಗಂಡಂದಿರು ಅತಿ ಹಳೆಯ ಸಂಗೀತದ ಪದಗಳನ್ನು ಯೋಚಿಸಿ "ಕರ್ತ ನಿನ್ನ ಸೇವೆಗೆ, *ನನ್ನ ಹೆಂಡತಿಯನ್ನು* ತೆಗೆದುಕೊಂಡು, ಪ್ರತಿಷ್ಠೆ ಪಡಿಸಿಕೋ."[2] ಒಬ್ಬ ಪ್ರಸಂಗಿಯು ನನಗೆ ತಿಳಿಸಿದ ಹಾಗೆ ಸಭೆಯಲ್ಲಿ ಬಹಳಷ್ಟು "ಭಾವಂದಿರು" ಇರುವರು. ಕ್ರೈಸ್ತರಲ್ಲದ ಗಂಡಂದಿರು ಕ್ರೈಸ್ತರಾದ ಪತ್ನಿಯರನ್ನು ಹೊಂದಿಕೊಂಡಿರುವದಕ್ಕೆ ಈ ರೀತಿ ವ್ಯಂಗವಾಗಿ ಮಾತನಾಡಲಾಗಿದೆ.

ನೀನು ಪುರುಷನಾಗಿದ್ದು ಇನ್ನೂ ಕ್ರೈಸ್ತನಾಗದೆ ಇದ್ದರೆ, ಈ ಹೊತ್ತೇ ಕ್ರೈಸ್ತನಾಗಲು ನಾನು ಪ್ರೋತ್ಸಾಯಿಸುತ್ತೇನೆ. ಕ್ರೈಸ್ತನಾಗುವದರಿಂದ ನೀನು ನಿನ್ನ, ಆತ್ಮವನ್ನು ಸಂರಕ್ಷಿಸಿಕೊಳ್ಳುವಿ. ಇನ್ನೊಬ್ಬರ ನೀತಿಯ ನಿಮಿತ್ತ ನೀನು ರಕ್ಷಣೆ ಹೊಂದಲು ಸಾಧ್ಯವಿಲ್ಲ. ಆದುದರಿಂದ ಪೌಲನು "ನಮ್ಮಲ್ಲಿ ಪ್ರತಿಯೊಬ್ಬನು ತನ್ನ ತನ್ನ ವಿಷಯವಾಗಿ ದೇವರ ಮುಂದೆ ಉತ್ತರಕೊಡಬೇಕು" ಎಂದು ಒತ್ತಿ ಹೇಳಿದ್ದಾನೆ (ರೋಮಪುರ 14:12).

ಕ್ರೈಸ್ತನಲ್ಲದ ಒಬ್ಬ ಮನುಷ್ಯನನ್ನು ಕುರಿತಾಗಿ, ಒಂದು ಊಹೆಯ ಕಥೆಯು ಹೇಳಲ್ಪಟ್ಟಿದೆ. ಅವನಿಗೆ ಒಂದು ಕನಸು ಬಿತ್ತು, ಆ ಕನಸಿನಲ್ಲಿ ಅವನು ಪರಲೋಕದ ಬಾಗಿಲಿಗೆ ಹೋಗಿದ್ದನು. ಅವನು ಆ ಬಾಗಿಲಿನಲ್ಲಿ ಪ್ರವೇಶಮಾಡಲು ಮುಂದಾದಾಗ ದ್ವಾರ ಪಾಲಕನು ಅವನನ್ನು ತಡೆದು "ನೀನು ಯಾರು?" ಎಂದು ಕೇಳಿದನು "ಸರಿ ನನ್ನ ಹೆಂಡತಿಯ ಪರಿಚಯವಿರುವವನಾಗಿರಬಹುದು." ಆ ಮನುಷ್ಯನು ತನ್ನ ಹೆಂಡತಿಯ ಹೆಸರನ್ನು ತಿಳಿಸಿ ಅವಳು ಹೇಗೆ ಸಭಾಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಳು ಎಂದು ವಿವರಿಸಿದನು. ಅವಳು ವೇಧಾಭ್ಯಾಸ ಮಾಡಿದ್ದಳು ಪ್ರಾರ್ಥಿಸುತ್ತಿದ್ದಳು. ಇತರರಿಗೆ ಸಹಾಯಮಾಡಿದ್ದಳು. ಅದಕ್ಕೆ ದ್ವಾರಪಾಲಕನು ಅವಳು ಎಂಥ ಒಳ್ಳೆಯ ಕ್ರೈಸ್ತಳಾಗಿದ್ದಳು, "ಆದರೆ ನಿನ್ನ ಹೆಂಡತಿ ಉತ್ತಮವಾದ ಕ್ರೈಸ್ತಳಾಗಿದ್ದದರಿಂದ" ನೀನು ಪರಲೋಕದೊಳಗೆ ಪ್ರವೇಶಿಸಲು ಸಾಧ್ಯವಿದೆ. ಆದರೆ ಆ ಮನುಷ್ಯನು "ನನ್ನ ಹೆಂಡತಿ ನನಗೋಸ್ಕರವಾಗಿ ಉತ್ತಮವಾದ ಕ್ರೈಸ್ತ ಜೀವಿತವನ್ನು ಜೀವಿಸಿದ್ದಳು ಮತ್ತು ನನಗಾಗಿ ಸಭೆಗೆ ಹೋಗುತ್ತಿದ್ದಳು." "ಅದಕ್ಕೆ ದ್ವಾರಪಾಲಕನು ಅದು ಒಳ್ಳೆಯದೆ ಈಗ ಆಕೆ ನಿನಗೋಸ್ಕರ ಪರಲೋಕಕ್ಕೆ ಹೋಗಿದ್ದಾಳೆ." ನಿನ್ನ ಆತ್ಮ ರಕ್ಷಿಸಲ್ಪಡಬೇಕಾಗಿದ್ದರೆ ನೀನೇ ಕ್ರೈಸ್ತನಾಗಬೇಕು.

ನೀನು ಕುಟುಂಬದಲ್ಲಿ ತಂದೆಯಾಗಿದ್ದರೆ, ನಿನ್ನ ಕುಟುಂಬದ ರಕ್ಷಣೆಗಾಗಿ ನೀನು ಮೊದಲು ಕ್ರೈಸ್ತನಾಗಬೇಕು. ನೀನು ತಿಳಿಯಬಹುದು, ಅಥವಾ ತಿಳಿಯದೇ ಇರಬಹುದು. ಆದರೆ ನೀನು ತಂದೆಯಾಗಿ ವಿಶೇಷವಾದ ಪ್ರಭಾವವನ್ನು ಹೊಂದಿರುತ್ತೀ - ಅದು ಒಳ್ಳೆ ಯದಕ್ಕೆ ಇರಬಹುದು ಅಥವಾ ಕೆಟ್ಟದ್ದಕ್ಕೆ ಇರಬಹುದು. ನಿನ್ನ ಹೆಂಡತಿಯು ಸರಿಯಾದ ಕಾರ್ಯವನ್ನು ಮಾಡುವಾಗ ನೀನು ಆತ್ಮಕ್ಕೆ ಅಡ್ಡಪಡಿಸಬೇಡ; ನೀನು ಯಾವುದೇ ವಿರೋಧವಿಲ್ಲದೆ ಸಕಾರಾತ್ಮಕವಾದ ಪ್ರಭಾವವನ್ನು ಆಕೆಯ ಮೇಲೆ ಬೀರುವಾಗ ಅವಳ ಪ್ರಭಾವ ಮಕ್ಕಳ ಮೇಲೆ ಬೀರುತ್ತದೆ. ಗಂಡಂದಿರ ವರ್ಚಸ್ಸಿನ ಬಗ್ಗೆ ಬೈಬಲಿನ ಎಲ್ಲಾ ಭಾಗದಲ್ಲೂ ತಿಳಿಸಲ್ಪಟ್ಟಿದೆ, 2 ತಿಮೊಥೆಯ 2:2ರ ವಾಕ್ಯ, ಪೌಲನು ತಿಮೊಥೆಯನಿಗೆ, "ನೀನು ನನ್ನಿಂದ ಅನೇಕ ಸಾಕ್ಷಿಗಳ ಮುಂದೆ ಕೇಳಿದ ಉಪದೇಶವನ್ನು ಇತರರಿಗೆ ಬೋಧಿಸ ಶಕ್ತಾರಾದ ನಂಬಿಗಸ್ತ ಮನುಷ್ಯರಿಗೆ ಒಪ್ಪಿಸಿಕೊಡು ಎಂದು ತಿಳಿಸಿದ್ದಾನೆ" (ಒತ್ತಿ ಹೇಳಿದ್ದು ನನ್ನದು).

ನನಗೆ ನಿಮ್ಮ ಕುಟುಂಬದ ಬಗ್ಗೆ, ಕಾಳಜಿ ಇರುವದರಿಂದ ನಾನು ಸಾಧ್ಯವಾದಷ್ಟು ಸರಳವಾಗಿ ಮಾತನಾಡುತ್ತಿದ್ದೇನೆ: ಕ್ರಿಸ್ತನಿಲ್ಲದೆ, ನೀನು ಯೋಗ್ಯ ಮನುಷ್ಯನಾಗುವುದು ಸಾಧ್ಯವಿಲ್ಲ. ಯೋಗ್ಯ ಗಂಡನಾಗುವದು ಸಾಧ್ಯವಿಲ್ಲ. ಯೋಗ್ಯ ತಂದೆಯಾಗುವದಕ್ಕೆ ಸಾಧ್ಯವಿಲ್ಲ. ಯೋಗ್ಯವಾದ ಪ್ರಭಾವವನ್ನು ಬೀರಲು ಸಾಧ್ಯವಿಲ್ಲ.

ಒಂದು ಸಾರಿ ಪ್ಲೇಟೋನಿಗೆ[3] ಈ ರೀತಿ ಪ್ರಶ್ನಿಸಿದರು, "ಮನುಷ್ಯ ಅಂದರೆ ಏನು?" ಅದಕ್ಕೆ ಅವರು, "ಪುಕ್ಕವಿಲ್ಲದ ಎರಡು - ಕಾಲಿನ ಪ್ರಾಣಿ" ಎಂದು ಉತ್ತರಿಸಿದರು.[4] ಪ್ರಾಣಿಗಳಿಗೆ ನಾಲ್ಕು ಕಾಲುಗಳಿದ್ದು ನಿನಗೆ ಎರಡು ಕಾಲುಗಳಿರುವದರಿಂದ, ಪ್ರಾಣಿಗೂ ಮನುಷ್ಯನಿಗೂ

ವ್ಯತ್ಯಾಸವನ್ನು ಕಂಡುಹಿಡಿಯಬಹುದೇ? ಪಕ್ಷಿಗಳಿಗೆ ಪುಕ್ಕವಿದ್ದು, ನಿನಗೆ ಇಲ್ಲದೆ ಇರುವದರಿಂದ ವ್ಯತ್ಯಾಸವನ್ನು ಕಂಡುಹಿಡಿಯ ಬಹುದೇ? ಯಥಾರ್ಥವಾಗಿ ಸಾಧ್ಯವಿಲ್ಲ! ಆದರೆ ದೇವರು ನಿನಗೆ ನಶಿಸಿಹೋಗದಂಥ ಆತ್ಮವನ್ನು ನೀಡಿರುವದರಿಂದ ಪ್ರಾಣಿಗಳಿಗಿಂತಲೂ ನೀನು ಹೆಚ್ಚಿನವನು (ಪ್ರಸಂಗಿ 12:7). ಒಂದು ದಿವಸ ನಿನ್ನ ಆತ್ಮವು ದೇವರ ನ್ಯಾಯತೀರ್ಪಿನ ಮುಂದೆ ನಿಲ್ಲಬೇಕು ಎಂದು ತಿಳಿದ ಮೇಲೆಯೂ ನಿನ್ನ ಜೀವಿತವನ್ನು ಯಾವ ರೀತಿಯಲ್ಲಿ ನಡೆಸಿಕೊಳ್ಳುತ್ತಿದ್ದಿ (ಪ್ರಕಟನೆ 20:11-25)? ನೀನು ಕ್ರೈಸ್ತನಾಗದ ಹೊರತು ಮನುಷ್ಯನಾಗಿ ಜೀವಿಸಲು ಅಸಾಧ್ಯ.

## ಪುರುಷರಾದಂಥ ತಂದೆಗಳು – ನಿಜವಾದ ತಂದೆಗಳು ಬೇಕಾಗಿದ್ದಾರೆ

ಎರಡನೆಯದಾಗಿ, ಪುರುಷರಾದಂಥ ತಂದೆಗಳು ಬೇಕಾಗಿದ್ದಾರೆ, "ಆದರೆ *ನಾನು* ತಂದೆಯಾಗಿದ್ದೇನೆ" ಎಂದು ಯಾರಾದರು ಹೇಳಬಹುದು. ನಿನ್ನ ಮನೆಯಲ್ಲಿ ಒಂದು ಮಗು ಇರುವದರಿಂದ, ನೀನು ತಂದೆಯಾಗಲಾರೆ ನಿನ್ನ ಮನೆಯಲ್ಲಿ ಒಂದು ಪುಸ್ತಕವಿರುವದರಿಂದ ನೀನು ಒಬ್ಬ ಬರಹಗಾರನಾಗಲಾರೆ.

ತಂದೆಗಳಾದಂತವರಿಗೆ ಬೈಬಲ್ ಭಾರವಾದ ಜವಾಬ್ದಾರಿಯನ್ನು ಹೊರಿಸುತ್ತದೆ: "*ತಂದೆಗಳೇ,* ನಿಮ್ಮ ಮಕ್ಕಳಿಗೆ ಕೋಪವನ್ನೆಬ್ಬಿಸದೆ ಕರ್ತನಿಗೆ ಮೆಚ್ಚಿಗೆಯಾಗಿರುವ ಬಾಲ ಶಿಕ್ಷೆಯನ್ನೂ ಬಾಲೋಪದೇಶವನ್ನೂ ಮಾಡುತ್ತಾ ಅವರನ್ನೂ ಸಾಕಿ ಸಲಹಿರಿ" (ಎಫೆಸ 6:4; ಒತ್ತಿ ಹೇಳಿದ್ದು ನನ್ನದು). ಮಕ್ಕಳಿಗೆ ಬಾಲೋಪದೇಶವನ್ನು ಮಾಡುವುದು ತಾಯಿಯ ಕರ್ತವ್ಯ ಎಂದು ಅನೇಕರು ಬಾವಿಸುತ್ತಾರೆ, ಆದರೆ ಅದು ಆ ರೀತಿಯಲ್ಲಿರುವದಿಲ್ಲ. ಇದು ತಂದೆಯ ಕೆಲಸವಾಗಿರುತ್ತದೆ. ಮಕ್ಕಳನ್ನು ಬೆಳೆಸುವ ವಿಷಯದಲ್ಲಿ ಮೊದಲನೆಯದಾಗಿ ತಂದೆಯೇ ಜವಾ ಬ್ದಾರಿವುಳ್ಳವನಾಗಿರುತ್ತಾನೆ.

ದೇವರು ಅಬ್ರಹಾಮನಿಗೆ ಹೇಳಿದ್ದೇನೆಂದರೆ, "ಅವನು ತನ್ನ ಪುತ್ರಪೌತ್ರರಿಗೆ - ನೀವು ನ್ಯಾಯ ನೀತಿಗಳನ್ನು ನಡೆಸಿ ಯೆಹೋವನ ಮಾರ್ಗವನ್ನು ಅನುಸರಿಸಬೇಕೆಂದು ಬೋಧಿ ಸುವಂತೆ ಅವನನ್ನು ನಾನು ಆದುಕೊಂಡೆನಲ್ಲಾ; ಅವನು ಹೀಗೆ ಮಾಡುವದರಿಂದ ಯೆಹೋವ ನಾದ ನನ್ನ ವಾಗ್ದಾನವು ನೆರವೇರುವದು ಅಂದುಕೊಂಡನು" (ಆದಿಕಾಂಡ 18:19ಎ). ಅಬ್ರಹಾಮನು ಅವನ ಕುಟುಂಬದಲ್ಲಿ ಆತ್ಮೀಕ ನಾಯಕನಾಗಿದ್ದ ವಿಷಯದಲ್ಲಿ ದೇವರು ಅವನಲ್ಲಿ ಭರವಸೆವುಳ್ಳವನಾಗಿದ್ದನು. ದೇವರು ಆ ರೀತಿಯಾದ ಭರವಸೆಯನ್ನು ನಿನ್ನ ಮೇಲೆ ಇಟ್ಟಿದ್ದಾನೋ?

ಯೆಹೋಶುವನು ಇಸ್ರಾಯೇಲ್ಯರ ಜೊತೆಯಲ್ಲಿ ಮಾತನಾಡಿದ ಕಡೇ ಮಾತೇನೆಂದರೆ,

> ಯೆಹೋವನನ್ನು ಸೇವಿಸುವದು ನಿಮಗೆ ಸರಿಕಾಣದಿದ್ದರೆ ಯಾರನ್ನು ಸೇವಿಸಬೇಕೆಂದಿ ದ್ದೀರಿ? ಈ ಹೊತ್ತೇ ಆರಿಸಿಕೊಳ್ಳಿರಿ. ನಿಮ್ಮ ಪೂರ್ವಿಕರು [ಯುಫ್ರೇಟೀಸ್] ನದಿಯ ಆಚೆಯಲ್ಲಿ ಸೇವಿಸುತ್ತಿದ್ದ ದೇವತೆಗಳೋ ಈ ದೇಶದ ಮೂಲ ನಿವಾಸಿಗಳಾದ ಅಮೋರಿ ಯರ ದೇವತೆಗಳೋ, ಹೇಳಿರಿ. *ನಾನೂ ನನ್ನ ಮನೆಯವರೂ ಯೆಹೋವನನ್ನೇ ಸೇವಿ ಸುವೆವು ಅಂದನು* (ಯೆಹೋಶುವ 24:15; ಒತ್ತಿ ಹೇಳಿದ್ದು ನನ್ನದು).

ಯೆಹೋಶುವನು ಸಂಪೂರ್ಣ ಕುಟುಂಬದೊಂದಿಗೆ ಮಾತನಾಡಿದನು. ಕಾರಣವೇನು? ಯಾಕೆಂದರೆ ಅವನು ಸ್ವಂತಃ ತಂದೆಯಾಗಿ ಎಲ್ಲಾ ಜವಾಬ್ದಾರಿಗಳನ್ನು ನೆರವೇರಿಸಿದ್ದನು.

ಆ ರೀತಿಯಾದ ತಂದೆಯಾಗುವದಕ್ಕೆ ಸ್ವಲ್ಪ ಸಮಯದ ಅವಶ್ಯವಿರುತ್ತದೆ. ನನಗೆ ಮೊದಲನೆಯ ಮಗಳು ಹುಟ್ಟಿದಂದಿನಿಂದ, ಅವರನ್ನು ನಂಬಿಗಸ್ತರಾದ ಕ್ರೈಸ್ತರನ್ನಾಗಿ ಮಾಡಲು ಅವಶ್ಯವಿರುವಷ್ಟು ಸಮಯವನ್ನು ವ್ಯಯಿಸುತ್ತಿದೆ. ಅದು ನನ್ನ ಪ್ರಥಮ ಆದ್ಯತೆಯಾಗಿತ್ತು. ನಾನು

ಅನೇಕ ಪ್ರಸಂಗಿಗಳನ್ನು ನೋಡಿದ್ದೇನೆ, ಅವರು ಇತರರಿಗೆ ಹೆಚ್ಚು ಸಮಯವನ್ನು ನೀಡಿ ತಮ್ಮ ಸ್ವಂತ ಮಕ್ಕಳನ್ನು ಅಲಕ್ಷ್ಯ ಮಾಡಿದ್ದರಿಂದ ಅದರ ಪರಿಣಾಮವಾಗಿ ಒಂದು ಅಥವಾ ಎರಡು ಮಕ್ಕಳನ್ನು ದೇವರಿಂದ ಕಳೆದು ಕೊಂಡವರಾಗಿರುತ್ತಾರೆ. ನನ್ನ ಹಿಂದಿನ ಜೀವನವನ್ನು, ನೆನಪು ಮಾಡಿಕೊಂಡರೆ ಕರ್ತವ್ಯ ನಿರತ ತಂದೆಯಾಗಿ ಕೆಲಸಮಾಡುವುದು ಕಷ್ಟಕರವಾ ಗಿರುತ್ತದೆ. ಯಾವುದೇ ತಂದೆಯಾದರು ತನ್ನ ಮಕ್ಕಳಿಗಾಗಿ ಪ್ರತ್ಯೇಕವಾದ ಸಮಯವನ್ನು ತೆಗೆದುಕೊಳ್ಳಲೇ ಬೇಕು. (ಸಮಯ ಮಾಡಿಕೊಳ್ಳಬೇಕು) ಅ ಸಮಯವು ಅತಿ ಅವಶ್ಯವಾ ದದ್ದು.

ನಿನಗೆ ಸಮಯವಿರದೆ ಇರಬಹುದು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಿನ್ನ ಮೇಲೆ ಇರುವಂಥ ಎಲ್ಲಾ ಜವಾಬ್ದಾರಿಗಳ ನಿಮಿತ್ತ ಒತ್ತಡಕ್ಕೆ ಒಳಗಾಗಿರಬಹುದು, ನಿನ್ನ ಸ್ವಂತ ಯಶಸ್ಸಿಗಾಗಿ, ನಿನ್ನ ಗುರಿಗಳನ್ನು ತಲುಪುವ ಸಲುವಾಗಿ ನಿನ್ನ ಮಕ್ಕಳನ್ನು ಬಲಿಕೊಡಬೇಡ. ಯೂದನು ಕರ್ತನನ್ನು ಮೂವತ್ತು ಬೆಳ್ಳಿನಾಣ್ಯಗಳಿಗಾಗಿ ಮಾರಿಬಿಟ್ಟನು. ಅವನ ತಪ್ಪನ್ನು ಅವನು ಅರಿಯುವಾಗ, "ಹೊರಟುಹೋಗಿ ಉರ್ಲು ಹಾಕಿಕೊಂಡು ಸತ್ತನು" (ಮತ್ತಾಯ 27:5ಬಿ). ಈ ದಿವಸಗಳಲ್ಲಿ, ಅನೇಕ ತಂದೆಗಳು ದೊಡ್ಡಮನೆಗಾಗಿ, ಉತ್ತಮವಾದ ವಾಹನಕ್ಕಾಗಿ, ಅವರ ಸ್ವಂತ ವರ್ಚಸ್ಸಿಗಾಗಿ,[5] ತಮ್ಮ ಮಕ್ಕಳನ್ನು ಮಾರಿಬಿಡುತ್ತಿದ್ದಾರೆ. ಕೊನೆಯದಾಗಿ ಅವರ ತಪ್ಪಿನ ಅರಿವು ಅವರಿಗಾಗುವಾಗ? ಯೇಸುವಿನ ವಿಶೇಷವಾದ ಮಾತುಗಳನ್ನು ಗಮನಿಸಿ, "ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣ ನಷ್ಟಪಟ್ಟರೆ ಅವನಿಗೆ ಪ್ರಯೋಜನ ವೇನು? ಅಥವಾ ಒಬ್ಬನು ತನ್ನ ಪ್ರಾಣಕ್ಕೆ ಏನು ಈಡು ಕೊಟ್ಟಾನು?" (ಮತ್ತಾಯ 16:26 ನೋಡಿರಿ.)

## ನಾಯಕರಾಗುವ ಪುರುಷರುಗಳು ಬೇಕಾಗಿದ್ದಾರೆ: ನಿಜವಾದ ನಾಯಕರುಗಳು

ಮೂರನೆಯದಾಗಿ, ನಾಯಕರಾಗಿರುವ ಮನುಷ್ಯರ ಅವಶ್ಯವಿದೆ. ಇದರ ಅರ್ಥ, ಸಾರ್ವಜನಿಕ ನಾಯಕರುಗಳ ಕುರಿತಾಗಿ ನಾನು ಹೇಳುತ್ತಿಲ್ಲ ಆತ್ಮೀಕ ವಿಷಯಗಳಲ್ಲಿ ಮುಂದಾಳತ್ವ ವಹಿಸುವ ನಾಯಕರುಗಳು, ಒಂದು ವೇಳೆ ಸಾರ್ವಜನಿಕವಾಗಿರಬಹುದು ಅಥವಾ ಖಾಸಗಿಯಾಗಿರಬಹುದು.

ಪುರುಷರು ನಾಯಕತ್ವವನ್ನು ವಹಿಸಿಕೊಳ್ಳಬೇಕು. ಪರಿಶುದ್ಧಾತ್ಮನು ಹಿರೀತನಕ್ಕೆ ಕೆಲವು ನಿರ್ದಿಷ್ಟವಾದಂತಹ ಅರ್ಹತೆಗಳನ್ನು ನೀಡಿದ್ದಾನೆ. ಈ ಅರ್ಹತೆಗಳು ಪುರುಷರಿಗೆ ಮಾತ್ರ ಮೀಸಲು (1 ತಿಮೊಥೆ 3:2; ತೀತ 1:6). ಸಭೆಯ ಸರ್ವಜನಿಕ ಕೂಟಗಳಲ್ಲಿ ಸ್ತ್ರೀಯರು "ಮೌನವಾಗಿರಬೇಕು" ಎಂದು ಹೊಸ ಒಡಂಬಡಿಕೆಯು ತಿಳಿಸುತ್ತದೆ (1 ಕೊರಿಂಥ 14:34) ಮತ್ತು "ಪುರುಷರ ಮೇಲೆ ಅಧಿಕಾರ ನಡಿಸಬಾರದು" (1 ತಿಮೊಥೆ 2:12).

ಬೈಬಲಿನಲ್ಲಿ ಪ್ರಸಿದ್ಧಿ ಹೊಂದಿರುವವರನ್ನು ಕುರಿತು ಯೋಚಿಸುವಾಗ, ನಮ್ಮ ಮನಸ್ಸು ಬೈಬಲಿನಲ್ಲಿರುವ ಅಸಾಧಾರಣ ಪುರುಷರ ಕಡೆಗೆ ಹೋಗುತ್ತದೆ. ನೋಹನು ಧೈರ್ಯ ಮತ್ತು ವಿಧೇಯತೆಗೆ ಆದರ್ಶವಾಗಿದ್ದಾನೆ. ಅಬ್ರಹಾಮನು ನಂಬಿಕೆಗೆ ಮಾದರಿಯಾಗಿದ್ದಾನೆ. ತಾಳ್ಮೆಗೆ, ಯೋಬನು ಉದಾಹರಣೆಯಾಗಿದ್ದಾನೆ. ಪರಿಶುದ್ಧವಾದ ಜೀವಿತಕ್ಕೆ ಯೋಸೇಫನು ನಿದರ್ಶನವಾಗಿದ್ದಾನೆ. ಕಾಲೇಬನ ಸಕಾರಾತ್ಮಕವಾದ ಆಲೋಚನೆ ಯೋಚಿಸಲಾಸಾಧ್ಯವಾ ದದ್ದು. ದೇವರಲ್ಲಿ ವಿಶ್ವಾಸವಿಡುವ ಕುರಿತು ದಾವೀದನು ನಮಗೆ ಬೋಧಿಸುವವನಾಗಿದ್ದಾನೆ. ಯೇಸುವಿನ ಪುನರುತ್ಥಾನದ ನಂತರ ಪೇತ್ರನು ಪ್ರಭಾವದ ನಾಯಕತ್ವವನ್ನು ನೀಡಿದನು. ಪರಿಶ್ರಮದ ಕೆಲಸಕ್ಕೆ ಪೌಲನು ಮಾದರಿಯಲ್ಲವೇ?

ನನ್ನನ್ನು ಅಪಾರ್ಥಮಾಡಿಕೊಳ್ಳಬೇಡಿ: ಬೈಬಲಿನಲ್ಲಿ ವಿಶೇಷ ಪ್ರಾಭಾವ ಬೀರಿದ ಸ್ತ್ರೀಯರು ಇಲ್ಲ ಎಂಬುದಾಗಿ ನಾನು ಹೇಳುತ್ತಿಲ್ಲ. ಕೆಲವರು, ಪುರುಷರ ಶಕ್ತಿಯನ್ನೇ ಮೀರಿಸಿದ ಉದಾಹರಣೆಗಳನ್ನು ನಾನು ಗಮನಿಸಿದ್ದೇನೆ. ಪುರುಷರೇ ನಾಯಕತ್ವವನ್ನು ವಹಿಸಿಕೊಳ್ಳ

ಬೇಕು ಎಂಬ ನಿಯಮವನ್ನೇ ನಾನು ಹೇಳುತ್ತಿರುವದು; ಕಾರ್ಯಗಳು ನಡೆಯುವಂತೆ ಪುರುಷರು ನಿಗಾವಹಿಸಬೇಕು ಮತ್ತು ಅದನ್ನು ನೆರವೇರಿಸಬೇಕು.

ಸ್ತ್ರೀಯರು ಗಂಡಂದಿರಿಗೆ ಅಧೀನರಾಗಿರಬೇಕು, ಎಂಬ ವಿಷಯದಲ್ಲಿ ಪೌಲನು ತನ್ನ ಕಾರಣಗಳನ್ನು ನೀಡುತ್ತಾನೆ, "ಮೊದಲು ನಿರ್ಮಿತನಾದವನು ಆದಾಮನಲ್ಲವೇ, ಆಮೇಲೆ ಹವ್ವಳು" (1 ತಿಮೊಥೆ 2:13). ಅವನು ಮತ್ತು ಬರೆದಿದ್ದೇನೆಂದರೆ ಇದಲ್ಲದೆ "ಪುರುಷನು ಸ್ತ್ರೀ ನಿಮಿತ್ತವಾಗಿ ನಿರ್ಮಾಣವಾಗಲಿಲ್ಲ; ಸ್ತ್ರೀಯು ಪುರುಷನ ನಿಮಿತ್ತವಾಗಿ ನಿರ್ಮಾಣವಾದಳು" (1 ಕೊರಿಂಥವರಿಗೆ 11:9).

ಬೈಬಲ್ ತಿಳಿಸುತ್ತದೆ, ಆತ್ಮೀಕವಾಗಿಯೂ, ಸ್ವಾಭಾವಿಕವಾಗಿಯೂ, ಪುರುಷನೇ ನಾಯಕತ್ವವನ್ನು ವಹಿಸಿಕೊಳ್ಳಬೇಕು; ಅವನು ಸೋತುಹೋದರೇ ಅದು ವಾಕ್ಯಕ್ಕೆ ವಿರೋಧವಾದದ್ದು ಮತ್ತು ಸ್ವಭಾವಕ್ಕೆ ವಿರೋಧವಾದದ್ದು. ಇದು ಯಾಕೆ ದೇವರ ಯೋಜನೆ ಯಾಗಿದೆ ಎಂದು ನಾನು ತಿಳಿದೆನು. "ಇತರರು ಮಾಡಲಿ" ಎಂಬ ಸ್ವಭಾವವು ಪುರುಷರಿಗೆ ಇರುವದರಿಂದ, ದೇವರು ಈ ಮಾರ್ಗದರ್ಶನವನ್ನು ನೀಡಿರಬಹುದು. (ಸೇವಾ ಸಂಘಟನೆಗಳಲ್ಲಿ, ಸ್ತ್ರೀ ಪುರುಷರಿಬ್ಬರೂ ಕಾರ್ಯನಿರ್ವಹಿಸುವಾಗ ಅನೇಕ ಸಾರಿ ಸ್ತ್ರೀಯರೇ ನಾಯಕತ್ವವನ್ನು ವಹಿಸಿಕೊಳ್ಳಲಿ ಎಂದು ಪುರುಷರು ಅವಕಾಶ ಮಾಡಿರುವದನ್ನು ನಾನು ಗಮನಿಸಿದ್ದೇನೆ.) ಯಾವುದೇ ಕಾರಣವಿರಲಿ ಬೈಬಲ್ ತಿಳಿಸುತ್ತದೆ. ಪುರುಷರೇ ಆತ್ಮೀಕ ನಾಯಕರಾಗಿರಬೇಕು - ಸಭೆಯಲ್ಲಿಯೂ, ಅವರ ಮನೆಗಳಲ್ಲಿಯೂ ಪುರುಷರೇ ನಾಯಕರಾಗಿರಬೇಕು.

ಎಷ್ಟೋ ಸಾರಿ ಪುರುಷರು ಈ ವಿಷಯದಲ್ಲಿ ವಿಫಲರಾಗಿದ್ದಾರೆ![6] ಸಭೆಗೆ ಹಾಜರಾಗುವ ವಿಷಯದಲ್ಲಿ: ಹೆಂಡತಿ, ಮಕ್ಕಳನ್ನು ಪುರುಷರು ವಾಹನದಲ್ಲಿ ಕರೆತಂದು ಅವರನ್ನು ಸಭಾ ಕಟ್ಟಡದ ಬಾಗಿಲಿನಲ್ಲಿ ಬಿಟ್ಟು ಇನೊಂದು ದೇವರಿಲ್ಲದ ಭಾನುವಾರವನ್ನು ಕಳೆಯಲು ಮನೆಗೆ ಹಿಂದಿರುಗುವದನ್ನು ನಾನು ನೋಡಿದ್ದೇನೆ.

ಕಾರ್ಪಸ್ ಕ್ರಿಸ್ಟಿ, ಟೆಕ್ಸಸ್‌ನ ಒಂದು ವೃತ್ತಪತ್ರಿಕೆಯಲ್ಲಿ, ಈ ರೀತಿಯಾದ ತಲೇ ಬರಹವು ಕಾಣಿಸಿತು: "ಆಲಯದಲ್ಲಿ ತಾಯಿ, ತಂದೆ ತೂಗಡಿಸುತ್ತಿದ್ದಾನೆ, ಮಗು ಮರಣವನ್ನು ಹೊಂದಿದೆ." ಮಗುವನ್ನು ತಂದೆಯ ಜೊತೆಯಲ್ಲಿ ಬಿಟ್ಟು, ಸಭೆಗೆ ಹಾಜರಾದ ತಾಯಿಯ ಬಗ್ಗೆ ಈ ಸುದ್ದಿ. ಮಗುವನ್ನು ಗಮನಿಸುವ ಬದಲು, ತಂದೆ ತೂಕಡಿಸಿದನು, ಮಗು ಆಟವಾಡುತ್ತಾ ಮುಂದುವರಿದು, ಒಂದು ಚಿಕ್ಕ ನೀರಿನ ಹೊಂಡದಲ್ಲಿ ಮುಳುಗಿ ಅಸುನೀಗಿತು. ಈ ಒಂದು ದೃಷ್ಟಾಂತವನ್ನು ಆತ್ಮೀಕ ಮಟ್ಟದಲ್ಲಿ, ಪ್ರತಿ ಭಾನುವಾರದ ಮುಂಜಾನೆಯ ಆರಾಧನೆಯಲ್ಲಿ ಪುನಃ ಪುನಃ ಒತ್ತಿ ಹೇಳಲಾಯಿತ್ತು. ತಾಯಿ ಸಭೆಗೆ ಹೋಗಿರುವಾಗ, ತಂದೆಯು ತೂಕಡಿಸು ವಾಗ, ಮಕ್ಕಳು ಆತ್ಮೀಕವಾಗಿ ಅಸುನೀಗುತ್ತಿದ್ದಾರೆ - ಯಾಕೆಂದರೆ ತಾಯಿ ಏಕಾಂಗಿಯಾಗಿ ಅವರಿಗೆ ತರಬೇತಿ ನೀಡಲು ಅಸಾಧ್ಯ.

ತರಬೇತಿಯ ಕುರಿತು ಮನೆಯಲ್ಲಿ ಬೋಧಿಸಬೇಕಾಗಿರುವ ಕುರಿತು ಗಮನಿಸಿರಿ. ಸಕಲ ಜವಾಬ್ದಾರಿಯನ್ನು ತಂದೆಯಿಂದಲೇ ಹೊರಬೇಕೆಂದು ಬೈಬಲ್ ತಿಳಿಸಿರುವದನ್ನು ನಾವು ಈಗಾಗಲೇ ಗಮನಿಸಿದ್ದೇವೆ (ಎಫೆಸ 6:4). ಇಷ್ಟೆಲ್ಲ ತಿಳಿದಿದ್ದರು ತಂದೆಯು ಮಾಡುವಂಥ ಪ್ರಾರ್ಥನೆಯಲ್ಲಿ, ಮಕ್ಕಳ ಹೆಸರೇ ಉಚ್ಚಾರವಾಗಿರುವದಿಲ್ಲ.

ದೇವರಿಗಾಗಿ ಕಾರ್ಯ ನಿರ್ವಹಿಸುವ ಕುರಿತಾಗಿ ಏನು? ಸ್ತ್ರೀಯರೇ ಎಲ್ಲಾ ಜವಾ ಬ್ದಾರಿ ಹೊರುತ್ತಾರೆ. ಕೆಲವು ಸಭೆಗಳಲ್ಲಿ ಸ್ತ್ರೀಯರು ಸಂಧಿಸದೇ ಹೋದರೆ, ಅವರು ಸಹಕರಿಸದೇ ಹೋದರೆ ಕಳೆದು ಹೋದವರನ್ನು ಅವರು ಹುಡುಕದೇ ಹೋದರೆ, ಆ ಅವಶ್ಯವಿರುವ ಕಾರ್ಯಗಳು ಹಾಗೇಯೇ ಉಳಿದು ಬಿಡುತ್ತವೆ.

ನನ್ನ ಪುರುಷ ಸ್ನೇಹಿತರು "ಸ್ತ್ರೀ ಸ್ವಾತಂತ್ರ್ಯದ ಕ್ರಾಂತಿ"ಯ ಬಗ್ಗೆ ಅಷ್ಟಾಗಿ ಬಲವನ್ನು ತೋರಿಸುವದಿಲ್ಲ. ಸ್ತ್ರೀಯರ ನಾಯಕತ್ವ ತೆಗೆದುಕೊಳ್ಳುವದನ್ನು ವಿರೋಧಿಸುತ್ತಾರೆ, ಅವರು ಸ್ತ್ರೀಯರ ನಾಯಕತ್ವವನ್ನು ಒಪ್ಪುವದಿಲ್ಲ ಮತ್ತು ದೇವರು - ಪುರುಷರಿಗೆ ಅನುಗ್ರಹಿಸಿದ ಜವಾ

ಬ್ದಾರಿಯನ್ನೂ ಸಹ ಅವರು ಒಪ್ಪಿಕೊಳ್ಳುವದಿಲ್ಲ.

"ರೋಮ ಪಟ್ಟಣವು ಏಕೆ ಬಿದ್ದುಹೋಯಿತು" ಎಂಬ ಶೀರ್ಷಿಕೆಯು ಓಕ್ಲಹೋಮ ಪಟ್ಟಣದ *ಓಕ್ಲಹೋಮನ್ ಮತ್ತು ಟೈಮ್ಸ್* ದಿನ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಆ ಶೀರ್ಷಿಕೆಯ ಒಂದು ಭಾಗವನ್ನು ಈ ಕೆಳಗೆ ನಮೂದಿಸಿದ್ದೇನೆ:[7]

> ಡಾಕ್ಟರ್ ಮೋರಿಸ್ ಅಂದರ್ ಪಿಲೆಡೆಲ್ಪಿಯಾದ ಪ್ರಾಮುಖ್ಯ ಮನ ಶಾಸ್ತ್ರಜ್ಞನು ಅಮೇರಿಕದಲ್ಲಿ ಪುರುಷರಿಗಾಗಿ, ಪುರುಷನಾಯಕತ್ವದ್ದ ಪುನಃ ಸ್ಥಾಪನೆಗೆ ಒಂದು ಕರೆಯನ್ನು ನೀಡಿದ್ದನು. ಇದೇ ರೋಮನ್ನರ ಬಿಳುವಿಕೆಗೆ ಕಾರಣವಾಯಿತು ಎಂದು ಹೇಳಿದನು.
>
> ಸುದ್ಧಿ ಸಮ್ಮೇಳನದಲ್ಲಿ ಅವರು ಹೇಳಿದ್ದೇನೆಂದರೆ ಸಮೃದ್ಧಿಗೆ ಅಮೇರಿಕನ್ನರು ಬೋಗ ಪುರುಷರಾಗುತ್ತಿದ್ದಾರೆ. ಇದು ಹೆಳೇ ರೋಮನ್ನರ ಪದ್ಧತಿಯಂತೆ.
>
> ರೋಮನ್ನರ ಸಂಪತ್ತು ಸ್ತ್ರೀಯರ ಕಾರ್ಯವೈಖರಿಯಲ್ಲಿ ಬದಲಾವಣೆಯನ್ನು ತಂದಿತ್ತು. ಮನುಷ್ಯರನ್ನು ಬಲಿಕೊಡುವ ಮುಖಾಂತರ ಸ್ತ್ರೀಯರು ಬಲಿಷರು ಮತ್ತು ಪರಾಕ್ರಮಿಗಳಾದರು.

ಡಾಕ್ಟರ್ ಅಂಡೆರ್ ಸರಿಯಾಗಿಯೇ ಹೇಳಿದರು ಎಂದು ನಾನು ಸಂದೇಶಿಸುತ್ತೇನೆ. ಜವಾಬ್ದಾರಿಯನ್ನು ತೆಗೆದುಕೊಳ್ಳದೆ ನಮ್ಮಲ್ಲಿ ಅನೇಕರು ಪುರುಷರಾಗಿಯೇ ಉಳಿಯುವ ಅವಕಾಶವಾದಿಗಳಾಗಿದ್ದಾರೆ. ನಮ್ಮ ಕುಟುಂಬಗಳಲ್ಲಿರುವ ತಂದೆಯರು, ಕುಟಂಬದ ಆತ್ಮೀಕ ಅಭಿವೃದ್ಧಿಗೆ ನಾಯಕರಾಗುವಂತೆ ನಮ್ಮ ತಂದೆಯಾದ ದೇವರು ಸಹಾಯಿಸಲಿ.

## ಮುಕ್ತಾಯ

ದೇವರಿಗೆ ಅವಶ್ಯವಿರುವ ಸದ್ಗುಣಗಳನ್ನು ಹೊಂದಿರುವ ಪುರುಷರ ಕೊರತೆ ಇರುವದಿಲ್ಲ, "ಬೇಕಾಗಿರುವ ಹತ್ತು ವಿಶೇಷ ಪುರುಷರ" ಕುರಿತು ಒಬ್ಬರು ಒಂದು ಪಟ್ಟಿಯನ್ನು ಮಾಡಿದ್ದಾರೆ:[8]

1. ದೇವರ ವ್ಯವಹಾರವೇ ಮನುಷ್ಯನ ವ್ಯವಹಾರಕ್ಕಿಂತ, ದೊಡ್ಡದು ಎಂದು ಹೇಳುವ ಪುರುಷ.
2. ಮಕ್ಕಳನ್ನು ಸಭೆಗೆ ಕಳುಹಿಸದೆ, ಸಭೆಗೆ ಮಕ್ಕಳನ್ನು ಕರಕೊಂಡು ಬರುವ ಪುರುಷ.
3. ತಾನೇ ಸರಿಯಾದ ಆದರ್ಶವ್ಯಕ್ತಿಯಾಗಿ ಇತರರನ್ನು ಸಂಧಿಸುವ ಪುರುಷನು.
4. ಭಾನುವಾರ ಬೆಳೆಗ್ಗೆ ನಿದ್ರಿಸುವದಕ್ಕಿಂತ, ಬೈಬಲನ್ನು ಹೆಚ್ಚಾಗಿ ಗಮನಿಸುವ ಪುರುಷ.
5. ತನ್ನ ಅತಿ ಆಸೆಯಲ್ಲಿ ಎಷ್ಟಿದೆ ಎಂದು ಕೊಳ್ಳದೆ ತನ್ನ ಸಮೃದ್ಧಿಯ ಪ್ರಕಾರ ನೀಡುವ ಪುರುಷ.
6. ತನಗಾಗಿ ಆರಾಧನೆಗೆ ಹೋಗದೆ, ಕ್ರಿಸ್ತನಿಗಾಗಿ ಆರಾಧನೆಗೆ ಹೋಗುವ ಪುರುಷನು.
7. ಸಹಾಯ ತೆಗೆದು ಕೊಳ್ಳುವದಕ್ಕಿಂತ, ಸಹಾಯ ಮಾಡುವಂಥ ಪುರುಷನು.
8. ಇತರರ ತಪ್ಪನ್ನು ಮೊದಲು ನೋಡದೆ, ತನ್ನ ತಪ್ಪನ್ನು ಮೊದಲು ನೋಡಿ ಕೊಳ್ಳುವ ಪುರುಷ.
9. ಅತಿ ಬುದ್ಧಿವಂತಿಕೆಯನ್ನು ಹೊಂದಿರದೆ, ದೇವರ ಚಿತ್ತವನ್ನು ಅನುಸರಿಸುವ ಮನಸ್ಸನ್ನು ಹೊಂದಿರುವ ಪುರುಷನು.
10. ಪ್ರಾರಂಭಿಕ ಘನತೆಯನ್ನು ಬಯಸದೆ, ಆತ್ಮಗಳನ್ನು ಗೆಲ್ಲುವ ಮನಸ್ಸನ್ನು ಹೊಂದಿರುವ ಪುರುಷನು.

"ನಾವೆಲ್ಲರು *ಪುರುಷ*ರಾಗಿರಬೇಕೆಂಬ" ಸವಾಲನ್ನು ನಾನು ನೀಡುವವನಾಗಿದ್ದೇನೆ. ದಾವೀದನು ಸೊಲೊಮೋನನಿಗೆ ಅಂತಿಮ ಸೂಚನೆಗಳನ್ನು ನೀಡಿ "ನೀನು ಧೈರ್ಯವಾ

ಗಿರು, ನಿನ್ನ *ಪೌರುಷವನ್ನು* ತೋರಿಸು" ಎಂದು ಹೇಳಿದನು (1 ಅರಸು 2:2ಎ; ಒತ್ತಿ ಹೇಳಿದ್ದು ನನ್ನದು). ಮೊದಲ ಕೊರಿಂಥ 16:13 ನಮಗೆ ಪ್ರೋತ್ಸಾಹವನ್ನು ನೀಡಿ: "ಧೃಡವಾಗಿ ನಿಲ್ಲಿರಿ, ಶೂರರಾಗಿರಿ, ಬಲಗೊಳ್ಳಿರಿ, *ಪುರುಷರಂತೆ* ವರ್ತಿಸಿರಿ" ಎಂದು ತಿಳಿಸುತ್ತದೆ (ಒತ್ತಿ ಹೇಳಿದ್ದು ನನ್ನದು).

ಪುರುಷರಂತೆಯೇ ವರ್ತಿಸುವಂತೆ ನಮ್ಮ ದೇವರು ನಮಗೆ ಸಹಾಯಿಸಲಿ ಕ್ರೈಸ್ತರಾಗಿ ಮುನ್ನುಗ್ಗುವಂತೆ ಸಹಾಯಿಸಲಿ ನಮ್ಮ ಕುಟುಂಬವನ್ನು ಕರ್ತನ ಸಮೀಪಕ್ಕೆ ನಡೆಸಲು ಮುಂದಾಗೋಣ. ಸರಿಯಾದದನ್ನೂ ಒಳ್ಳೆಯದನ್ನೂ ನೆರವೇರಿಸುವದಕ್ಕೆ ಮುಂದಾಳತ್ವವನ್ನು ವಹಿಸೋಣ.[9]

---

ಟಿಪ್ಪಣಿಗಳು

[1]ಯೆರೆಮೀಯ 5:1 ಸಮನಾದ ವಾಕ್ಯವು ಬರೆಯಲ್ಪಟ್ಟಿದೆ. [2]"ತಕ್ಕೋ ನನ್ನ ಜೀವನ ನಿನ್ನ ಸೇವೆಗೆ" ಎಂಬ ನಿಜವಾದ ಸಂಗೀತ ಫ್ರಾನ್ಸಿಸ್ ಎಮ್. ಹಾವರ್ಗಿಲ್. [3]ಪ್ಲೇಟೋ ಗ್ರೀಕರ ತತ್ವಜ್ಞಾನಿಯಾಗಿದ್ದನು. [4]ಪ್ಲೇಟೋ ಎಂಬದಾಗಿ ಹಾರ್ಬರ್ಟ್ ತಿಳಿಸಿದ್ದಾರೆ. V. Prochnow and Herbert V. Prochnow, Jr., *A Dictionary of Wit, Wisdom, and Satire* (New York: Popular Library, 1962), 172. [5]ನನ್ನ ಬಹಳಷ್ಟು ಸಮಯವನ್ನು ಮಕ್ಕಳಿಗಾಗಿ ಬೇರೆಕಡೆ ವ್ಯಯಿಸುತ್ತಿದ್ದೇವೆ ಎಂದು ಕೆಲವೇ ತಂದೆ ತಾಯಿಗಳು ತಿಳಿಸುತ್ತಿದ್ದಾರೆ. ಇದು ನನ್ನ ಮಕ್ಕಳನ್ನು ಉತ್ತಮ ಸ್ಥಿತಿಗೆ ತರುವದಕ್ಕಾಗಿ ಪರಿಣಾಮ ಮಾತ್ರ ಅವರು ಮಕ್ಕಳನ್ನು ಅಲಕ್ಷಮಾಡಿದ್ದಾರೆ. [6]ನಾನು ವಾಸಿಸುತ್ತಿರುವಂಥ ಸ್ಥಳದಲ್ಲಿ ಪುರುಷರು ನಾಯಕತ್ವವನ್ನು ಹೊರುವದಿಲ್ಲ. ಮತ್ತು ವಿಫಲರಾಗಿದ್ದಾರೆ ವಿಶೇಷವಾದ ಆದರ್ಶವನ್ನು ನೀವು ನೀಡಬೇಕು. [7]*ಟ್ರೂತ್ ಫಾರ್ ಟುಡೇಯಲ್ಲಿ* ಅಮೇರಿಕಾಗೆ ಸಂಬಂಧ ಪಟ್ಟ ಉದಾಹರಣೆಗಳನ್ನು ಉಪಯೋಗಿಸದೇ ಇರುವದಕ್ಕೆ ಆದಷ್ಟು ಪ್ರಯತ್ನ ಮಾಡುತ್ತೇವೆ. ಆದರೂ ಪುರುಷ ನಾಯಕತ್ವದ ಕೊರತೆ ಅಮೇರಿಕ ದೇಶಕ್ಕೆ ಮಾತ್ರ ಸಂಬಂಧಪಟ್ಟಿದ್ದಲ್ಲ. ವಾರ್ತಾ ಪತ್ರಿಕೆಯಲ್ಲಿ ಉಪಯೋಗಿಸದ ವಿಷಯವನ್ನು ಪ್ರಪಂಚದಲ್ಲಿರುವ ಅನೇಕ ಈ ತರ ಸಮಾಜಗಳಿಗೆ ವರ್ತಿಸಬಹುದು. [8]ಈ ಪಟ್ಟಿಯ ಶಿರ್ಷಿಕೆ ಕಾನೂನು ಒತ್ತಾಯಿಸುವ ಸಂಸ್ಥೆಯವರು ಬಿಡುಗಡೆ ಮಾಡಿದ ಪಟ್ಟಿಯಿಂದ ತೆಗೆಯಲ್ಪಟ್ಟಿತು. ಈ ಆತ್ಮೀಯ "ಬೇಕಾಗಿರುವ ಹತ್ತು ವಿಶೇಷ ಪುರುಷರು" ಎಂಬ ಪಟ್ಟಿಯ ಸಭೆಯ ವಾರ್ತಾ ಪತ್ರಿಕೆಯಲ್ಲಿ "ಹೆಸರಿಲ್ಲದ" ಬರಹಗಾರ ಎಂದು ಕೆಲವು ವರ್ಷಗಳ ಹಿಂದೆ ಮುದ್ರಿಸಲ್ಪಟ್ಟಿತು. [9]ನಿಮ್ಮ ಪ್ರಸಂಗದ ಅಂತ್ಯದಲ್ಲಿ ದೀಕ್ಷಸ್ನಾನ ಮಾಡಿಸಿಕೊಳ್ಳಲು ಆಹ್ವಾನವನ್ನು ನೀಡುವುದಾದರೆ ಅಥವಾ ನಂಬಿಗಸ್ತರಾದ ಕ್ರೈಸ್ತರಾಗುವದಕ್ಕೆ ಆಹ್ವಾನವನ್ನು ನೀಡುವುದಾದರೆ; ಮೊದಲು ಪುರುಷರು ತಮ್ಮ ಹೊಣೆಯನ್ನು ಹೊರುವಂತೆ ಆಹ್ವಾನಿಸಿರಿ ನಂತರ ಇತರರಿಗೆ ಆಹ್ವಾನ ನೀಡಿರಿ.